ಶ್ರೀ ಡಿ.ಟಿ. ರಾಮು.—೩೫ ಹಳ್ಳಿಗಳಿಗೆ ವಿದ್ಯುತ್ ಸರಬರಾಜು ಮಾಡಬೇಕಾದರೆ ೩ ವರ್ಷಗಳಲ್ಲಿ ಮಾಡುತ್ತೇವೆಂದು ಉತ್ತರ ಕೊಟ್ಟಿದ್ದೀರಿ. ಕಳೆದ ೩ ವರ್ಷಗಳಲ್ಲಿ ೪ ಹಳ್ಳಿಗಳಲ್ಲಿ ವಿದ್ಯುತ್ ಒದಗಿಸಲಿಕ್ಕೆ ಏನು ಕಾರಣ ಸ್ವಾಮಿ ?

ಶ್ರೀ ಜಿ.ಎಚ್. ಅಶ್ವತ್ಥ ರೆಡ್ಡಿ.—ಮಾನ್ಯ ಅಧ್ಯಕ್ಷರೆ, ೫೫ ಪರ್ಸೆಂಟ್ ಹಳ್ಳಿಗಳಿಗೆ ಕರೆಂಟ್ ಕೊಟ್ಟಿದ್ದೇವೆ. ಬೇರೆ ತಾಲ್ಲೂಕುಗಳಲ್ಲಿ ಕಡಿಮೆ ಇತ್ತು, ಅಲ್ಲಿ ಕೊಟ್ಟಿದ್ದೇವೆ. ರೂರಲ್ ಎಲೆಕ್ಟ್ರಿಫಿಕೇಷನ್ ಸ್ಕೀಮಿನಲ್ಲಿ ಇದು ಸೇರಿದೆ. ಇನ್ನು ಮೂರು ವರ್ಷಗಳಲ್ಲಿ ಮಾಡಿಕೊಡುತ್ತೇವೆ.

ಶ್ರೀ ಡಿ.ಟಿ. ರಾಮು.—ಉದ್ದೇಶಿತ ಪ್ರಮಾಣದಲ್ಲಿ ಆಗದೇ ಇರಬೇಕಾದರೆ ಕಾರಣ, ಕೆಲವು ಕಡೆ ಕಂಭಗಳಿವೆ, ವೈರ್‌ಗಳು ಇಲ್ಲ, ಕೆಲವು ಕಡೆ ವೈರ್‌ಗಳಿವೆ, ಕಂಭಗಳಿಲ್ಲ, ಇವರೆಡೂ ಇದ್ದರೆ ಇನ್‌ಸ್ಟ್ಯಲೇಷನ್ಸ್ ಇಲ್ಲ. ಈ ರೀತಿ ಆದ್ವಾನವಾಗಿದೆ. ಈ ರೀತಿ ನಿಧಾನವಾಗುತ್ತಿರುವುದರಿಂದ ಉಪಕರಣಗಳನ್ನು ಮತ್ತು ಸಲಕರಣೆಗಳನ್ನು ಒದಗಿಸಿಕೊಡುತ್ತೀರಾ ?

ಶ್ರೀ ಜಿ. ಎಚ್. ಅಶ್ವತ್ಥ ರೆಡ್ಡಿ.—ಉಪಕರಣಗಳಿಗೆ, ಸಲಕರಣೆಗಳಿಗೆ ಆರ್ಡರ್ ಕೊಟ್ಟಿದ್ದೇವೆ. ಈಗ ಆದಷ್ಟು ಬೇಗ ಎಲೆಕ್ಟ್ರಿಫಿಕೇಷನ್ ಮಾಡಿಕೊಡುತ್ತೇವೆ.

Sanction of Girls High School to Tiptur Town.

491. SRI V. L. SHIVAPPA (Tiptur) Will the Minister of State for Primary and Secondary Education, be pleased to state:—

(a) when the Government Girls High School was started in Tiptur;

(b) the number of girls students studying there;

(c) the number of teachers to be required to the school as per norms fixed by the Department (the details of graduates, language assistants, arts teachers and clerical staff, may be furnished)?

SMT. NAGAMMA C. KESHAVA MURTHY (Minister of State for Primary and Secondary Education).—

(a) The school was started on 13-8-1948 (32 years).

(b) 465 girl students.

(c) —

1.	Head Master	...	1
2.	Graduate Assistant Teachers	...	12
3.	Kannada Pandit	...	1
4.	Urdu Pandit	...	1
5.	Hindi Pandit	...	1
6.	Craft Teachers	...	2
7.	Physical Instructors	...	2
8.	Second Division Clerk	...	1
9.	Attender	...	1
10.	Peons	...	5

ಶ್ರೀ ವಿ.ಎಲ್. ಶಿವಪ್ಪ.—ಕೊಟ್ಟಿರತಕ್ಕ ಉತ್ತರದಲ್ಲಿ ಸುಮಾರು ೨೦ ಜನ ಟೀಚಿಂಗ್ ಸ್ಟಾಫ್ ಬೇಕಾಗುತ್ತದೆ ಎಂದು ಹೇಳಿದ್ದೀರಿ. ಆದರೆ ಈಗಿರತಕ್ಕ ಉಪಾಧ್ಯಾಯರು ಎಷ್ಟು ಜನ, ೧೯೭೮ನೇ ಇಸವಿಯಲ್ಲಿ ಎಷ್ಟು ಜನ ಇದ್ದರು, ೧೯೭೯ರಲ್ಲಿ ಎಷ್ಟು ಜನ ಇದ್ದರು, ೧೯೮೦ರಲ್ಲಿ ಎಷ್ಟು ಜನ ಇದ್ದರು? ಎರಡನೆಯದು, ಸಂಸ್ಕೃತ ಹೇಳಿಕೊಡತಕ್ಕ ಬಗ್ಗೆ ಹೇಳಿಲ್ಲ. ಅಲ್ಲಿ ಸಂಸ್ಕೃತ ಒಂದು ವಿಷಯವಾಗಿದೆಯೋ ಇಲ್ಲವೋ, ಇಲ್ಲದೇ ಹೋದರೆ ಸಂಸ್ಕೃತ ಪಂಡಿತರನ್ನೇಕೆ ವಿಷದಪಡಿಸಿಲ್ಲ?

ಶ್ರೀ ಜಿ. ಬಿ. ಶಂಕರರಾವ್ (ಶ್ರೀಮತಿ ನಾಗಮ್ಮ ಸಿ. ಕೇಶವ ಮೂರ್ತಿಯವರ ಪರವಾಗಿ).—ಮಾನ್ಯ ಅಧ್ಯಕ್ಷರೆ, ಹಾಲಿ ಇರತಕ್ಕ ಶಿಕ್ಷಕರ ಸಂಖ್ಯೆಯನ್ನು ಹೇಳಿದ್ದೇನೆ. ೧೯೭೮–೧೯೭–೧೯೮೦ ರಲ್ಲಿ ಎಷ್ಟೆಷ್ಟಿದ್ದರು ಎನ್ನತಕ್ಕ ವಿವರ ಇಲ್ಲ. ಹಾಲಿ ಇರತಕ್ಕ ಶಿಕ್ಷಕರ ಸಂಖ್ಯೆಯನ್ನು ಕೊಟ್ಟಿದ್ದೇನೆ. ಸಂಸ್ಕೃತ ವಿದ್ಯಾಭ್ಯಾಸಕ್ಕೆ ಅನುಕೂಲ ಇಲ್ಲ ಎಂದು ಹೇಳುತ್ತಾರೆ, ಅದಕ್ಕೆ ಕಾರಣ ಸಂಸ್ಕೃತ ಓದತಕ್ಕ ವಿದ್ಯಾರ್ಥಿಗಳ ಸಂಖ್ಯೆ ಕಡಿಮೆ ಇರಬಹುದು. ಅಥವಾ ಇಲ್ಲದೇ ಇರಬಹುದು. ಬೇಕು ಅಂದರೆ ಆ ಶಿಕ್ಷಕರ ಸಂಖ್ಯೆಯನ್ನು ಒದಗಿಸಿಕೊಡುತ್ತೇನೆ.

ಶ್ರೀ ವಿ.ಎಲ್. ಶಿವಪ್ಪ.—ಇಲ್ಲಿ ಎಷ್ಟು ಹುಡುಗಿಯರು ಇದಾರೊ ಅವರಿಗೆ ಪ್ರಫೋರ್ಷನೇಟಾಗಿ ಉಪಾಧ್ಯಾಯರು ಇರಬೇಕಾಗುತ್ತದೆ, ಅದಕ್ಕೆ ತಾವು ೨೦ ಜನ ಇರಬೇಕಾಗುತ್ತದೆ ಎಂದು ಹೇಳಿದ್ದೀರಿ. ಅದರಲ್ಲಿ ಎಷ್ಟು ಜನ ಸ್ಟಾಫ್ ಇದ್ದಾರೆ. ೧೯೭೮–೭೯–೮೦ ರಲ್ಲಿ ಎಷ್ಟು ಜನ ಇದ್ದರು, ೨೦ ಜನರೂ ಇರಲಿಲ್ಲವೇ, ಇದ್ದರೆ ಎಷ್ಟು ಜನ ಇದ್ದರು?

ಶ್ರೀ ಜಿ.ಬಿ. ಶಂಕರರಾವ್.—ಉತ್ತರದಲ್ಲಿ ಅಚ್ಚಾಗಿದೆ. ಮುಖ್ಯೋಪಾಧ್ಯಾಯರೂ ಒಬ್ಬರನ್ನು ಬಿಟ್ಟು ೧೯ ಜನ ಇದ್ದಾರೆ. ಒಟ್ಟು ೨೦ ಜನ ಇದೆ, ಉತ್ತರ ಸರಿಯಾಗಿದೆ.

ಶ್ರೀ ವಿ.ಎಲ್. ಶಿವಪ್ಪ.— ಎಲ್ಲಿ ೧೧ ಜನ ಉಪಾಧ್ಯಾಯರಿದ್ದಾರೆ. ಅದಕ್ಕಿಂತ ಹೆಚ್ಚಿಗೆ ಅಲ್ಲಿ ಉಪಾಧ್ಯಾಯರ ಸಂಖ್ಯೆ ಇಲ್ಲ. ೩ ವರ್ಷಗಳಿಂದ ಆ ಹೆಣ್ಣುಮಕ್ಕಳಿಗೆ ಸರಿಯಾದ ಪಾಠ ಪ್ರವಚನ ಇಲ್ಲ. ಸಂಸ್ಕೃತವನ್ನು ಎರಡನೇ ಭಾಷೆಯಾಗಿ ತೀರ್ಮಾನ ಮಾಡಿದ್ದೇವೆ. ಓದತಕ್ಕ ವಿದ್ಯಾರ್ಥಿಗಳಿಲ್ಲ ಅಂದರೆ ಅದರ ಬಗ್ಗೆ ಏಷ್ಟು ಗಮನ ಕೊಟ್ಟಿದ್ದೇವೆ ಎಂದು ಅರ್ಥವಾಗುತ್ತದೆ. ಅಲ್ಲಿ ೧೧ ಜನ ಉಪಾಧ್ಯಾಯರು ಇದ್ದಾರೆ. ಆದುದರಿಂದ ಉಳಿದಿರತಕ್ಕ ಉಪಾಧ್ಯಾಯರನ್ನು ಕೊಟ್ಟು, ಸಂಸ್ಕೃತ ಅಧ್ಯಾಪಕರನ್ನು ನೇಮಕ ಮಾಡುತ್ತೇವೆಂದು ಆಶ್ವಾಸನೆ ಕೊಡುತ್ತೀರಾ?

ಶ್ರೀ ಜಿ. ಬಿ. ಶಂಕರರಾವ್.—ಇಲಾಖೆ ಮುಖಾಂತರ ಒದಗಿಸಿರತಕ್ಕ ಮಾಹಿತಿ ಮೇಲೆ ಹೇಳುತ್ತಿದ್ದೇನೆ.

ಶ್ರೀ ವಿ.ಎಲ್. ಶಿವಪ್ಪ.—ಸಂಬಂಧಪಟ್ಟ ಮಂತ್ರಿಗಳಿಲ್ಲ, ಸರಿಯಾದ ಉತ್ತರವಿಲ್ಲ, ಆದ್ದರಿಂದ ಈ ಪ್ರಶ್ನೆಯನ್ನು ಹೆಲ್ಡ್ ಓವರ್ ಮಾಡಿದರೆ ಇನ್ನೊಂದು ಸಲ ಕೇಳಬಹುದು.

ಶ್ರೀ ಜಿ. ಬಿ. ಶಂಕರರಾವ್.—ಹಾಲಿ ಇರತಕ್ಕ ಶಿಕ್ಷಕರ ಸಂಖ್ಯೆಯನ್ನು ನಾನು ಒದಗಿಸಿದ್ದೇನೆ. ತಾವು ಇಲ್ಲ ಎಂದು ಹೇಳುತ್ತೀರಿ ಅದನ್ನು ಪರಿಶೀಲನೆ ಮಾಡುತ್ತೇನೆ, ಶಿಕ್ಷಕರನ್ನು ಒದಗಿಸಿ ಕೊಡುತ್ತೇನೆ. ಆ ಒಂದು ಭರವಸೆಯನ್ನು ತಮಗೆ ಕೊಡುತ್ತೇನೆ.

ಶ್ರೀ ಎಂ. ಗಂಗಣ್ಣ.—ಮಾನ್ಯ ಸದಸ್ಯರ ಉದ್ದೇಶವೇನೆಂದರೆ, ವಿದ್ಯಾರ್ಥಿನಿಯರ ಸಂಖ್ಯೆಗನುಗುಣವಾಗಿ ಉಪಾಧ್ಯಾಯರಿಲ್ಲಿ, ಆರ್ಟ್ಸ್ ಅಂಡ್ ಸೈನ್ಸ್‌ನಲ್ಲಿ ಶಿಕ್ಷಕರು ಇದ್ದಾರೆಯೋ ಇಲ್ಲವೋ, ಇದ್ದರೆ ಎಷ್ಟು ಜನ ಇದ್ದಾರೆ. ವಿದ್ಯಾರ್ಥಿಗಳ ಸಂಖ್ಯೆಗನುಗುಣವಾಗಿ ಟೀಚರ್ಸ್ ಇಲ್ಲದೇ ಹೋದರೆ ಅವರನ್ನು ತುಂಬಲು ಸರ್ಕಾರ ಯಾವ ಕ್ರಮ ತೆಗೆದುಕೊಳ್ಳುತ್ತದೆ. ವಿದ್ಯಾರ್ಥಿಗಳ ಸಂಖ್ಯೆಯನ್ನು ದಯವಿಟ್ಟು ತಿಳಿಸಬೇಕು?

ಶ್ರೀ ಜಿ.ಬಿ. ಶಂಕರರಾವ್.—ಮಾನ್ಯ ಸದಸ್ಯರು ವಿವರ ಕೇಳಿದ್ದಾರೆ. ಅಲ್ಲಿರತಕ್ಕ ವಿದ್ಯಾರ್ಥಿನಿಯರ ಸಂಖ್ಯೆ ೪೫೫. ಇದಕ್ಕೆ ಒಬ್ಬರು ಮುಖ್ಯೋಪಾಧ್ಯಾಯರು, ಪದವೀಧರ ಸಹೋಪಾಧ್ಯಾಯರು ೧೨, ಕನ್ನಡ ಪಂಡಿತರು ೧, ಉರ್ದು ಪಂಡಿತರು ೧, ಹಿಂದೀ ಪಂಡಿತರು—೧, ಕ್ರಾಫ್ಟ್ ಶಿಕ್ಷಕರು ೨, ವ್ಯಾಯಾಮ ಶಿಕ್ಷಕರು ೨, ೨ನೇ ದರ್ಜೆ ಗುಮಾಸ್ತರು ೧, ಆಟೆಂಡರ್—೧, ಸೇವಕರು ೫.

ಶ್ರೀ ವಿ.ಎಲ್. ಶಿವಪ್ಪ.—ವಿಷಯ ಏನೇ ಇರಲಿ, ಈಗಲಾದರೂ ಆದಷ್ಟು ತಕ್ಷಣ ಉಳಿದ ಉಪಾಧ್ಯಾಯರನ್ನು ಒದಗಿಸಿಕೊಡಲು ತರಾತುರಿ ಮಹಿಸುತ್ತೀರಾ?

ಶ್ರೀ ಜೆ.ಬಿ. ಶಂಕರರಾವ್—ಎಲ್ಲೆಲ್ಲಿ ಶಿಕ್ಷಕರ ಭಾಗ ಖಾಲಿ ಇದೆ ಅಲ್ಲಿ ಸ್ಥಳೀಯ ಅಭ್ಯರ್ಥಿಗಳನ್ನು ನೇಮಕಾತಿ ಮಾಡಿಕೊಳ್ಳುವುದಕ್ಕೆ ಸಹ ನಿರ್ದೇಶಕರಿಗೆ ಆದೇಶವಿದೆ. ಆ ರೀತಿ ಕಾರ್ಯಕ್ರಮ ತೆಗೆದು ಕೊಂಡು ಶಿಕ್ಷಕರನ್ನು ಒದಗಿಸಿಕೊಡುತ್ತೇನೆಂದು ಭರವಸೆಯನ್ನು ಮಾನ್ಯ ಸದಸ್ಯರಿಗೆ ಕೊಡುತ್ತೇನೆ.

ಶ್ರೀ ವಿ.ಎಲ್. ಶಿವಪ್ಪ —ಇದು ಪಾಲಿಸಿ ಮ್ಯಾಟರ್ ಆಯಿತು, ಆ ಉತ್ತರದಿಂದ ಪ್ರಯೋಜನ ವಿಲ್ಲ. ೫೦೦ ಹೆಣ್ಣುಮಕ್ಕಳಿಗೆ ವಿದ್ಯಾಭ್ಯಾಸ ಲಾಸ್ ಆಗಿದೆ. ೧೧ ಜನ ಉಪಾಧ್ಯಾಯರು ಇದ್ದಾರೆ. ನಾನು ದೇಶದ ವಿಷಯ ಕೇಳಲಿಲ್ಲ, ನನ್ನ ಕ್ಷೇತ್ರದ ಆ ಒಂದು ಸ್ಕೂಲಿನ ಹೆಣ್ಣು ಮಕ್ಕಳಿಗೆ ಬಹಳ ಅನ್ಯಾಯವಾಗಿದೆ. ೧೧ ಪರ್ಸೆಂಟ್ ಪಾಸ್ ಆಗಿದ್ದಾರೆ, ಒಂದು ಸಬ್ಜೆಕ್ಟ್ ಹೋದರೆ ಜೀವನ ಮಾಡುವು ದಕ್ಕೆ ಕಷ್ಟವಾಗುತ್ತದೆ. ಗ್ರಾಜುಯೇಟ್ ಆಗದೇಹೋದರೆ ಯಾರೂ ಹೆಣ್ಣುಮಕ್ಕಳನ್ನು ಮದುವೆ ಯಾಗುವುದಿಲ್ಲ. ಅವರ ವಿದ್ಯಾಭ್ಯಾಸ ದೃಷ್ಟಿಯಿಂದ ಎಷ್ಟು ಉಪಾಧ್ಯಾಯರು ಬೇಕೋ ಅಷ್ಟು ಉಪಾಧ್ಯಾಯರನ್ನು ನೇಮಕ ಮಾಡಿಕೊಡುತ್ತೀರಾ?

ಶ್ರೀ ಜೆ.ಬಿ. ಶಂಕರರಾವ್.—ತೀವ್ರವಾಗಿ ಖಾಲಿ ಇರಬಹುದಾದಂಥ ಸ್ಥಾನಗಳಿಗೆ ಭರ್ತಿ ಮಾಡಲಿಕ್ಕೆ ಈಗಲೇ ಆದೇಶ ಕೊಡುತ್ತೇನೆ.

Kumudavathi Lift Irrigation Scheme

537 SRI SHEERNALY CHANDRASEKHAR (Hosanagar).— Will the Minister for Transport and Minor Irrigation be pleased to state.—

(a) whether Government is aware that there is a great demand from the people of Kumsi Town and the surrounding villages for Kumudavathi Lift Irrigation Scheme ;

(b) whether the Government is aware that the people of that area are prepared to remit the water tax and other expenditure tax in connection with the Lift Irrigation Scheme.

(c) when they will take up the work?

SRI M. M. J. SADYOJATHA (Minister for Transport and Minor Irrigation).—

(a) Yes.

(b) Not aware.

(c) As no yield is Left-over in Kumudavati river there is no possibility of taking up this work.

ಶ್ರೀ ಎಸ್. ಎಂ. ಶೀರ್ನಾಳಿ ಚಂದ್ರಶೇಖರ್.—ಅಧ್ಯಕ್ಷರೇ, ನನ್ನ ಭಾಗ್ಯ ಮಾನ್ಯ ಸಚಿವರು ನನ್ನ (ಅ) ಪ್ರಶ್ನೆಗೆ ಉತ್ತರದಲ್ಲಿ ಹೌದೆಂದು ಹೇಳಿದ್ದಾರೆ ಮತ್ತು (ಆ) ಪ್ರಶ್ನೆಗೆ ಇಲ್ಲವೆಂದು ಹೇಳಿದ್ದಾರೆ. ಸ್ವಾಮಿ, ಇಲ್ಲಿ ಉತ್ತರ ಕೊಡುವಾಗ ಇದನ್ನು ನಿಮ್ಮ ಸಂಬಂಧಪಟ್ಟ ಅಧಿಕಾರಿಗಳು ಏನಾದರೂ ಪರಿಶೀಲನೆ ಮಾಡಿ ಉತ್ತರ ಕೊಟ್ಟಿದ್ದಾರೆಯೇ ಎಂದು ಕೇಳುತ್ತಿದ್ದೇನೆ.

ಶ್ರೀ ಎಂ. ಎಂ. ಜೆ. ಸದ್ಯೋಜಾತ.—ಪರಿಶೀಲನೆ ಮಾಡಿಯೇ ಇಲ್ಲಿ ಉತ್ತರ ಕೊಡಲಾಗಿದೆ, ಪರಿಶೀಲನೆ ಮಾಡದೇ ಉತ್ತರ ಹೇಗೆ ಕೊಡುವುದಕ್ಕೆ ಸಾಧ್ಯ?

ಶ್ರೀ ಶೀರ್ನಾಳಿ ಚಂದ್ರಶೇಖರ್.—ನಾನು ಮೂಲಭೂತವಾದ ಪ್ರಶ್ನೆ ಕೇಳುತ್ತಿದ್ದೇನೆ. ಅಲ್ಲಿಯ ಸಂಬಂಧಪಟ್ಟ ಶಾಸಕನಾಗಿ, ಅಲ್ಲಿಯ ಜನರ ಅಭಿಪ್ಪೆಯನ್ನು ಅರಿತವನಾಗಿಯೇ ಈ ಪ್ರಶ್ನೆಯನ್ನು ಕೇಳಿರು ವಾಗ ನಿಮ್ಮ ಅಧಿಕಾರಿಗಳು ಉತ್ತರದಲ್ಲಿ ಇಲ್ಲವೆಂದು ಕೊಟ್ಟಿದ್ದಾರಲ್ಲ ಇದು ಸತ್ಯಕ್ಕೆ ದೂರವಾದುದೆಂದು ಹೇಳಬಯಸುತ್ತಿದ್ದೇನೆ.